# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ರಾಜ್ಯದಲ್ಲಿ ನೂತನವಾಗಿ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯನ್ನು ಸೃಜಿಸುವುದು ಹಾಗೂ ಈ ಸಂಬಂಧ ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಅವಶ್ಯವಿರುವ ಸರ್ಕಾರದ ಕಾರ್ಯದರ್ಶಿ ಹಾಗೂ ಪೂರಕ ಸಿಬ್ಬಂದಿಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ : ಕಾರ್ಮಿಕ ಇಲಾಖೆಯ ಕಡತ ಸಂಖ್ಯೆ ಕಾಇ 171 ಇಟಿಐ 2016.

* * * * * *

**ಪ್ರಸ್ತಾವನೆ :**

2016-17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ರಾಜ್ಯದಲ್ಲಿ ನೂತನವಾಗಿ ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆಯನ್ನು ಸೃಜಿಸಲು ಘೋಷಿಸಲಾಗಿದ್ದು, ಆಯವ್ಯಯ ಭಾಷಣದ ಕಂಡಿಕೆ 367 ರಲ್ಲಿ ಈ ಕೆಳಕಂಡ ಘೋಷಣೆಯನ್ನು ಮಾಡಲಾಗಿದೆ :

> "ಉದ್ಯೋಗಾವಕಾಶ ಹೆಚ್ಚಿಸುವ ಏಕೈಕ ಉದ್ದೇಶದಿಂದ ಎಲ್ಲಾ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಒಂದೇ ಇಲಾಖೆಯಡಿ ತರಲು ಉದ್ದೇಶಿಸಿದ್ದು ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆಯನ್ನು ಸೃಜಿಸಲಾಗುವುದು. ಇದು ಮಾನ್ಯ ಮುಖ್ಯಮಂತ್ರಿಗಳ ನೇರ ನಿಯಂತ್ರಣದಲ್ಲಿ ಇರುತ್ತದೆ. ಇದು ಕೌಶಲ್ಯ ಅಭಿವೃದ್ಧಿಯನ್ನು ತೀವ್ರ ಗತಿಯಲ್ಲಿ (Mission Mode) ಹೆಚ್ಚಿಸುವ ದಿಸೆಯಲ್ಲಿ ಸಾಧ್ಯವಾಗುವುದರೊಂದಿಗೆ ವಿವಿಧ ಇಲಾಖೆಗಳೊಂದಿಗೆ ಸಮನ್ವಯತೆಯನ್ನು ಸಾಧಿಸುವುದನ್ನು ಖಾತರಿಪಡಿಸುತ್ತದೆ. ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ವಿಧಾನಗಳಲ್ಲಿ ಹಣಕಾಸು ದೊರಕಿಸುವ ಸಾಧ್ಯತೆಗಳನ್ನು ಸಹ ಈ ಧ್ಯೇಯವು ಕಂಡುಕೊಳ್ಳಲಿದೆ. ಈ ಉದ್ದೇಶಕ್ಕಾಗಿ 2016-17ನೇ ಸಾಲಿನಲ್ಲಿ 500 ಕೋಟಿ ರೂ.ಗಳನ್ನು ಕ್ರೋಢೀಕರಿಸಲಾಗುವುದು".

ಪ್ರಸಕ್ತ ವ್ಯವಸ್ಥೆಯಲ್ಲಿ ರಾಜ್ಯದ ಅನೇಕ ಇಲಾಖೆಗಳು, ನಿಗಮ ಮಂಡಳಿಗಳು ಕೌಶಲಾಭಿವೃದ್ಧಿ ತರಬೇತಿಯನ್ನು ನೀಡುತ್ತಿರುತ್ತವೆ. ಆದರೆ ಈ ಕೌಶಲ್ಯಾಭಿವೃದ್ಧಿ ತರಬೇತಿಗಳಲ್ಲಿ ಪುನರುಕ್ತಿಯಾಗುವ (duplication) ಸಾಧ್ಯತೆ ಇದ್ದು, ಇವುಗಳ ಸೂಕ್ತ ಮೇಲ್ವಿಚಾರಣೆ ಕೈಗೊಳ್ಳುವ "ಏಕೀಕೃತ ಮೇಲ್ವಿಚಾರಣಾ ವ್ಯವಸ್ಥೆ" ಜಾರಿಗೊಳಿಸಬೇಕಾಗಿದೆ. ಎಲ್ಲಾ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಉದ್ಯೋಗಾವಕಾಶ ಹೆಚ್ಚಿಸುವ ಉದ್ದೇಶದಿಂದ ಒಂದೇ ಇಲಾಖೆಯಡಿಯಲ್ಲಿ ತರಲು ಸರ್ಕಾರವು ನಿರ್ಣಯಿಸಿದೆ. ಇದರಿಂದ ರಾಜ್ಯದ ಯುವಜನತೆಗೆ, ದುಡಿಯುವ ಕೈಗಳಿಗೆ ಉತ್ತಮ ಬೆಳವಣಿಗೆಗೆ ಹಾಗೂ ಅದರಲ್ಲೂ ಸಮಾಜದ ಅಂಚಿನಲ್ಲಿರುವ ಗುಂಪುಗಳ ಅಂತರ್ಗತ ಬೆಳವಣಿಗೆಗೆ ಇದು ಅವಶ್ಯವಿದ್ದು ಯೋಗ್ಯ ಕೆಲಸ ಹಾಗೂ ಜೀವನೋಪಾಯ ನಿರ್ವಹಣೆಗೆ ಅತ್ಯಗತ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸಕ್ತ ವ್ಯವಸ್ಥೆಯನ್ನು ಏಕೀಕೃತ ಮೇಲ್ವಿಚಾರಣೆಯಲ್ಲಿ ಅನುಷ್ಠಾನಗೊಳಿಸಲು ಸರ್ಕಾರವು ಯೋಜಿಸಿದ್ದು, ಇದರಿಂದ ಗ್ರಾಮಮಟ್ಟದಿಂದ ಹಿಡಿದು ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದವರೆಗೆ ಕೌಶಲ್ಯಾಭಿವೃದ್ಧಿ ತರಬೇತಿಗೆ ಫಲಾನುಭವಿಗಳ ಆಯ್ಕೆ ಹಾಗೂ ತರಬೇತಿ ನೀಡಲು ಸಹಾಯಕವಾಗಲಿದೆ.

ಈ ಉದ್ದೇಶಗಳನ್ನು ಕಾರ್ಯಗತಗೊಳಿಸಲು, ಸರ್ಕಾರವು ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಎಂಬ ಹೊಸ ಇಲಾಖೆಯನ್ನು ಸೃಜಿಸಲು ಸರ್ಕಾರವು ನಿರ್ಧರಿಸಿದೆ ಹಾಗೂ ಕರ್ನಾಟಕ ಸರ್ಕಾರ ಸಚಿವಾಲಯದ ಸಿಬ್ಬಂದಿ ಮಾದರಿಯನ್ವಯ ಕರ್ನಾಟಕ ಸರ್ಕಾರ ಸಚಿವಾಲಯ ಮಟ್ಟದಲ್ಲಿ ಸರ್ಕಾರದ ಕಾರ್ಯದರ್ಶಿ ಹಾಗೂ ಪೂರಕ ಸಿಬ್ಬಂದಿಗಳನ್ನು ಸೃಜಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 164 ಸಲುಸೇ 2016,**
**ಬೆಂಗಳೂರು, ದಿನಾಂಕ 24-9-2016.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ನಿಯಂತ್ರಣಕ್ಕೆ ಒಳಪಟ್ಟಂತೆ ರಾಜ್ಯದಲ್ಲಿ ನೂತನವಾಗಿ **"ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ" (Department for Skill Development, Entrepreneurship and Livelihood)** ಯನ್ನು ಸೃಜಿಸಲಾಗಿದೆ. ಈ ಇಲಾಖೆಗೆ ಕರ್ನಾಟಕ ಸರ್ಕಾರ ಸಚಿವಾಲಯ ಮಟ್ಟದಲ್ಲಿ ಸಚಿವಾಲಯದ ಸಿಬ್ಬಂದಿ ಮಾದರಿಯನ್ವಯ ಅವಶ್ಯವಿರುವ ಸರ್ಕಾರದ ಕಾರ್ಯದರ್ಶಿ ಹಾಗೂ ಪೂರಕ ಸಿಬ್ಬಂದಿಗಳನ್ನು ಈ ಕೆಳಕಂಡಂತೆ ಸೃಜಿಸಲಾಗಿದೆ :

| ಕ್ರಮ ಸಂಖ್ಯೆ | ಹುದ್ದೆಯ ಪದನಾಮ ಮತ್ತು ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ |
|---|---|---|
| 1) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಸರ್ಕಾರದ ಪ್ರಧಾನ ಕಾರ್ಯದರ್ಶಿ / ಸರ್ಕಾರದ ಕಾರ್ಯದರ್ಶಿ | 01 |
| | **ಕಾರ್ಯದರ್ಶಿಯವರ ಆಪ್ತ ಶಾಖೆ** | |
| | ಶೀಘ್ರಲಿಪಿಗಾರರು (ಪತ್ರಾಂಕಿತ ಆಪ್ತ ಸಹಾಯಕರು / ಹಿರಿಯ ಶೀಘ್ರಲಿಪಿಗಾರರು) (ರೂ. 20000-36300) | 02 |
| | ಭಾಷಾಂತರಕಾರರು (ಶಾಖಾಧಿಕಾರಿ / ಹಿರಿಯ ಸಹಾಯಕ) (ರೂ. 22800-43200) | 01 |
| | ಕಿರಿಯ ಸಹಾಯಕ (ರೂ. 11600-21000) | 01 |
| | ಚಾಲಕರು (ರೂ. 11600-21000) | 01 |
| | ದಲಾಯತ್ (ರೂ. 9600-14550) | 02 |

| | | |
|---|---|---|
| 2) | ಸರ್ಕಾರದ ಉಪ ಕಾರ್ಯದರ್ಶಿ (ರೂ. 40050-566550) | 01 |
| | ಶೀಘ್ರಲಿಪಿಗಾರರು (ಹಿರಿಯ ಶೀಘ್ರಲಿಪಿಗಾರರು / ಶೀಘ್ರಲಿಪಿಗಾರರು) (ರೂ. 20000-36300) | 01 |
| | ಕಿರಿಯ ಸಹಾಯಕ (ರೂ. 11600-21000) | 01 |
| | ದಲಾಯತ್ (ರೂ. 9600-14550) | 01 |
| 3) | **ಅಧೀನ ಕಾರ್ಯದರ್ಶಿ** (ರೂ. 28100-50100) | 01 |
| | ಶೀಘ್ರಲಿಪಿಗಾರರು (ರೂ. 20000-36300) | 01 |
| | ದಲಾಯತ್ (ರೂ. 9600-14550) | 01 |
| 4) | **ಶಾಖಾಧಿಕಾರಿ** (ರೂ. 22800-43200) | 02 |
| | ಹಿರಿಯ ಸಹಾಯಕರು (ರೂ. 20000-36300) | 02 |
| | ಸಹಾಯಕರು (ರೂ. 16000-29600) | 04 |
| | ಕಿರಿಯ ಸಹಾಯಕರು (ರೂ. 11600-21000) | 02 |
| | ಬೆರಳಚ್ಚುಗಾರರು (ರೂ. 11600-21000) | 02 |
| | ದಲಾಯತ್ (ರೂ. 9600-14550) | 02 |
| | **ಒಟ್ಟು ಹುದ್ದೆಗಳು** | **29** |

ನೂತನ ಇಲಾಖೆಗೆ ವಿಷಯಗಳ ಹಂಚಿಕೆಗೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು 1977 ಗೆ ಪ್ರತ್ಯೇಕ ತಿದ್ದುಪಡಿ ಹೊರಡಿಸಲಾಗುವುದು.

ಮುಂದುವರಿದು, ಈ ಇಲಾಖೆಯ ಅಧೀನದಲ್ಲಿ ಈ ಕೆಳಕಂಡ 3 ಆಯುಕ್ತಾಲಯಗಳು ಕಾರ್ಯ ನಿರ್ವಹಿಸತಕ್ಕದ್ದು :

1) **ಆಯುಕ್ತಾಲಯ, ಕೌಶಲ್ಯಾಭಿವೃದ್ಧಿಯ ಗುಣಮಟ್ಟ, ಪಠ್ಯಕ್ರಮ ಹಾಗೂ ತರಬೇತುದಾರರ ತರಬೇತಿ :**

(ವಿಷಯಗಳು : ಗುಣಮಟ್ಟ, ಪ್ರಮಾಣೀಕರಣ, ಮೌಲ್ಯಮಾಪನ, ಪಠ್ಯಕ್ರಮ ಅಭಿವೃದ್ಧಿ, ತರಬೇತುದಾರರ ತರಬೇತಿ, ಎನ್.ಎಸ್.ಕ್ಯೂ.ಎಫ್., ಎನ್.ಸಿ.ವಿ.ಟಿ. ಇತ್ಯಾದಿ.) (ಹಾಲಿ ಇರುವ ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆ, ನಿಗಮ ಹಾಗೂ ಅದರ ಸಿಬ್ಬಂದಿಯನ್ನು ನೂತನ ಇಲಾಖೆಯಲ್ಲಿ ಬರುವಂತೆ ಸ್ಥಳಾಂತರಿಸಿ ಈ ವ್ಯವಸ್ಥೆಯನ್ನು ಸೃಜಿಸತಕ್ಕದ್ದು)

2) ಆಯುಕ್ತಾಲಯ, ಕೈಗಾರಿಕಾ ತರಬೇತಿ ಹಾಗೂ ಶಿಶಿಕ್ಷು ತರಬೇತಿ :

ಕೈಗಾರಿಕಾ ತರಬೇತಿ ಸಂಸ್ಥೆಗಳ ಹಾಗೂ ಕೌಶಲ್ಯ ಅಭಿವೃದ್ಧಿ ಸಂಸ್ಥೆಗಳು ಬಹುಕೌಶಲ್ಯ ಅಭಿವೃದ್ಧಿ ಕೇಂದ್ರಗಳ ಆಡಳಿತ ಮತ್ತು ನಿರ್ವಹಣೆ, ಶಿಶಿಕ್ಷು ತರಬೇತಿ, ಸೆಕ್ಟರ್ ಸ್ಕಿಲ್ ಕೌನ್ಸಿಲ್ ಮತ್ತು ಕೈಗಾರಿಕೆಗಳೊಂದಿಗೆ ಸಮನ್ವಯ ಮತ್ತು ಸಂಪರ್ಕ. (ಆಯುಕ್ತರು, ಉದ್ಯೋಗ ಮತ್ತು ತರಬೇತಿ ಹುದ್ದೆ ಪೂರ್ಣ ಇಲಾಖೆಯೊಂದಿಗೆ ಹಾಗೂ ಅದರ ಸಿಬ್ಬಂದಿಯನ್ನು ನೂತನ ಇಲಾಖೆಯಲ್ಲಿ ಬರುವಂತೆ ಸ್ಥಳಾಂತರಿಸಿ, ಈ ವ್ಯವಸ್ಥೆಯನ್ನು ಸೃಜಿಸತಕ್ಕದ್ದು)

3) ಆಯುಕ್ತಾಲಯ, ಉದ್ಯಮಶೀಲತೆ ಮತ್ತು ಜೀವನೋಪಾಯ :

ಉದ್ಯಮಶೀಲತೆ ಮತ್ತು ಅಭಿವೃದ್ಧಿ, ಇನ್ಕ್ಯುಬೇಷನ್ ಸೆಂಟರ್, ಬ್ಯಾಂಕಿಂಗ್ ಹಾಗೂ ಹಣಕಾಸು ಸಂಬಂಧಿಸಿಂತೆ ಸಮನ್ವಯ / ಸಂಪರ್ಕ, ಹಿಂದಿನ-ಮುಂದಿನ ಸಮನ್ವಯ ಸೇತುವೆ, ಪ್ರಕಟಣೆ, ಜೀವನೋಪಾಯ ಅಭಿವೃದ್ಧಿ, ಸಬಲೀಕರಣ, ಅನೌಪಚಾರಿಕ ವ್ಯವಸ್ಥೆಯ ಕೌಶಲ್ಯವರ್ಧನೆ, ಪ್ಲೇಸ್ಮೆಂಟ್ ಸೇವೆಗಳು, ವೃತ್ತಿ ಮಾರ್ಗದರ್ಶನ, ವಿದೇಶಗಳಲ್ಲಿ ಉದ್ಯೋಗಾವಕಾಶ ಇತ್ಯಾದಿ. (ಆಯುಕ್ತರು, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್‌ನ ನಿರ್ದೇಶಕರ ಹುದ್ದೆ ಹಾಗೂ ಇದರ ಕಾರ್ಯಕ್ರಮ ಅನುಷ್ಠಾನ ಸಂಬಂಧಿತ ರಚಿಸಲಾಗಿರುವ ಸಂಸ್ಥೆ / ವ್ಯವಸ್ಥೆ ಹಾಗೂ ಕಾರ್ಯಕ್ರಮವನ್ನು, ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್‌ನ ಅನುಷ್ಠಾನಕ್ಕಾಗಿ ಇರುವ ವ್ಯವಸ್ಥೆಯನ್ನು ಹಾಗೂ ಅದರ ಸಿಬ್ಬಂದಿಯನ್ನು ನೂತನ ಇಲಾಖೆಯಲ್ಲಿ ಬರುವಂತೆ ಸ್ಥಳಾಂತರಿಸಿ, ಈ ವ್ಯವಸ್ಥೆಯನ್ನು ಸೃಜಿಸತಕ್ಕದ್ದು)

ಮೇಲಿನ ಆಯುಕ್ತಾಲಯಗಳ ಸೃಜನೆ, ಕಾರ್ಯ ವ್ಯವಸ್ಥೆ, ಸಿಬ್ಬಂದಿಗಳ ಸ್ಥಳಾಂತರ ಮುಂತಾದ ವಿಷಯಗಳ ಬಗ್ಗೆ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ಕ್ರಮ ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

24/9/16

**(ಚಂದ್ರಹಾಸ ಗಂ. ತಾಳೂಕರ)**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ-ಸುಧಾರಣೆ ಇಲಾಖೆ
(ಸೇವೆಗಳು-3)

ಇವರಿಗೆ :

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ – ಮುಂದಿನ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲು ಹಾಗೂ 100 ಪ್ರತಿಗಳನ್ನು ಸಿ.ಆ.ಸು. ಇಲಾಖೆಗೆ ಒದಗಿಸಲು.

ಪ್ರತಿಗಳು :

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್.ಎಸ್.ಎ)/(ಇ&ಆರ್.ಎಸ್.ಎ)/(ಎ&ಇ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
4) ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ 1 ಮತ್ತು 2, ವಿಧಾನಸೌಧ, ಬೆಂಗಳೂರು.
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಕಾರ್ಮಿಕ ಇಲಾಖೆ, ವಿಕಾಸಸೌಧ.
6) ಸರ್ಕಾರದ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳು.
7) ಸರ್ಕಾರದ ಕಾರ್ಯದರ್ಶಿ, ಸಿ.ಆ.ಸು. ಇಲಾಖೆ, ವಿಧಾನಸೌಧ, ಬೆಂಗಳೂರು.
8) ಸರ್ಕಾರದ ಉಪ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು)
9) ಸರ್ಕಾರದ ವಿಶೇಷ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾ ನಿಯಮಗಳು)
10) ಸರ್ಕಾರದ ವಿಶೇಷ / ಅಪರ ಕಾರ್ಯದರ್ಶಿ (ಆಡಳಿತ), ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
11) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ) ವಿಷಯ ಸಂಖ್ಯೆ ಸಿ/449/2016ರ ಮಾಹಿತಿಗಾಗಿ.
12) ಸರ್ಕಾರದ ಉಪಕಾರ್ಯದರ್ಶಿ (ಸಿಬ್ಬಂದಿ), ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
13) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಲೆಕ್ಕಪತ್ರ 1, 2 & 3 : ಐಆರ್‌ಎಲ್ಎ) / (ಕಾರ್ಯಕಾರಿ) / (ಆಡಳಿತ-1, 2 & 3) (ಸಿಬ್ಬಂದಿ) / (ರಾಜ್ಯ ಶಿಷ್ಟಾಚಾರ) / ಸೇವೆಗಳು-1, 2, 3, 4, 5, 7
14) ಶಾಖಾ ರಕ್ಷಕ ಕಡತ.